# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 245/2023

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | ಃ | ಡಾ.ಸ್ಮಿತಾ.ಜಿ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ | ಶಿವವಮೂರ್ತಿ | | **10.06.2025** |
| **ವಯಸ್ಸು** | ಃ | 47 ವರ್ಷ | | |
| **ವೃತ್ತಿ** | ಃ | ಸೀನಿಯರ್ ಸೈಂಟಿಫಿಕ್ ಆಫೀಸರ್, ಎಫ್.ಎಸ್.ಎಲ್, ಬೆಂಗಳೂರು | **ಪ್ರಾ.ಸಾ.** | ಃ 12 |
| **ವಾಸಸ್ಥಳ** | ಃ | ಬೆಂಗಳೂರು | **ಚಾ.ಸಾ.** | ಃ 12 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2014* ರಿಂದ ಅಕ್ಟೋಬರ್ *2023* ರವರೆಗೆ ಆರ್.ಎಫ್.ಎಸ್.ಎಲ್ ಮೈಸೂರಿನಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೆನು. ದಿಃ *28.03.2023* ರಂದು ಮೇಟಗಳ್ಳಿ ಪೋಲೀಸ್ ಠಾಣೆಯ ಮೊ.ಸಂಖ್ಯೆ *33/2023* ದಲ್ಲಿ ಪೊಲೀಸ್ ಪೇದೆ ಶಿವಕುಮಾರ್ ರವರ ಮುಖಾಂತರ *2* ಸೀಲಾದ ವಸ್ತುಗಳನ್ನು ನಮ್ಮ ಕಛೇರಿಗೆ ಸಲ್ಲಿಸಲಾಗಿದ್ದು ಅದನ್ನು ನೊಂದಣಿ ಮಾಡಿ ಎಫ್.ಎಲ್.ಎಂ.ಎಸ್ ಬಿ.ಎಸ್ *293/2023* ಎಂದು ನೊಂದಣಿ ಮಾಡಿ ನಮ್ಮ ಜೀವಶಾಸ್ತ್ರ ವಿಭಾಗಕ್ಕೆ ಕಳುಹಿಸಿದ್ದರು. ಎಫ್.ಎಲ್.ಎಂ.ಎಸ್ ಮೂಲಕ ನನಗೆ ಆ ವಸ್ತುಗಳನ್ನು ವಿಶ್ಲೇಷಿಸಿ ವರದಿ ನೀಡುವಂತೆ ಕೋರಿದ್ದರು. ಪರೀಕ್ಷೆಗಾಗಿ ಸದರಿ ವಸ್ತುಗಳನ್ನು ಪರೀಕ್ಷೆಗೆ ತೆಗೆದು ನೋಡಿದಾಗ ಅವುಗಳ ಮೇಲೆ ಇದ್ದ ಸೀಲುಗಳು ಸುಸ್ಥಿತಿಯಲ್ಲಿದ್ದು ಹಾಗೂ

ಮಾದರಿ ಸೀಲಿನೊಂದಿಗೆ ತಾಳೆಯಾಗುತ್ತಿತ್ತು. ಅವುಗಳನ್ನು ಬಿಚ್ಚಿ ನೋಡಿದಾಗ ಅವುಗಳಲ್ಲಿ ಈ ಕೆಳಕಂಡ ವಸ್ತುಗಳು ಇದ್ದವು

*1.* ಒಂದು ಟಿ.ಶರ್ಟ್

*2.* ಒಂದು ಡ್ರ್ಯಾಗರ್

ಮೇಲೆ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ನನಗೆ ಅಭಿಪ್ರಾಯ ವರದಿಯನ್ನು ನೀಡಿದ್ದೆನು. ವಸ್ತು ಸಂಖ್ಯೆ *1* ಮತ್ತು *2* ರಲ್ಲಿ ರಕ್ತದ ಕಲೆಗಳು ಕಂಡುಬಂದಿದ್ದು. ಆ ರಕ್ತದ ಕಲೆಗಳು ಮನುಷ್ಯನ ಒ ಗುಂಪಿನ ರಕ್ತದ ಕಲೆಗಳು ಆಗಿದ್ದವು. ಪರೀಕ್ಷೆ ನಂತರ ಆ ಎಲ್ಲಾ ವಸ್ತುಗಳನ್ನು ಮರು ಪ್ಯಾಕ್ ಮಾಡಿ ನಮ್ಮ ಕಛೇರಿಯ ಸೀಲ್ ಮಾಡಿ ಮಾದರಿ ಸೀಲ್ ನೊಂದಿಗೆ ಸಂಬಂದಪಟ್ಟ ಪೋಲೀಸ್ ಠಾಣೆಗೆ ಕಳುಹಿಸಿದ್ದೆನು. ನಾನು ಪರೀಕ್ಷೆ ಮಾಡಿದ ವಸ್ತುಗಳನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಒಂದು ಟಿ.ಶರ್ಟ್ ಮತ್ತು ಡ್ರ್ಯಾಗರ್ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ-*1* ಮತ್ತು *2* ಎಂದು ಗುರುತಿಸಲ್ಪಟ್ಟಿದೆ. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-*17* ಎಂದು ಮತ್ತು ಸಾಕ್ಷಿದಾರರ ಡಿಜಿಟಲ್ ಸಹಿಯನ್ನು ನಿ.ಪಿ-*17(*ಎ*)* ಎಂದು ಗುರುತಿಸಲಾಯಿತು. ಮಾದರಿ ಸೀಲ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-*18* ಮತ್ತು ಸಾಕ್ಷಿದಾರರ ಸಹಿಯನ್ನು ನಿ.ಪಿ-*18(*ಎ*)* ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದ:-

2. ಸಂಬಂದಪಟ್ಟ ಪೋಲೀಸ್ ಠಾಣೆಯಿಂದ ನನಗೆ ನೋಟೀಸ್ ಬಂದಿರಲಿಲ್ಲ. ಸದರಿ ನೋಟಿಸ್ ನಮ್ಮ ಕಛೇರಿಗೆ ಬಂದಿರಬಹುದು. ನನ್ನ ಮೇಲಾಧಿಕಾರಿಗಳು ಮುದ್ದೆ ಮಾಲು *1*

ಮತ್ತು *2* ಅನ್ನು ಪರೀಕ್ಷಿಸಿ ವರದಿ ನೀಡುವಂತೆ ಲಿಖಿತವಾಗಿ ಸೂಚಿಸಿರಲಿಲ್ಲ. ನಿ.ಪಿ*–17* ರಲ್ಲಿ ಮುದ್ದೆ ಮಾಲು *1* ರ ಟಿ.ಶರ್ಟ್ ನ ಬಣ್ಣದ ವಿವರ ಹೇಳಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಮುದ್ದೆ ಮಾಲು *2* ರ ಬಗ್ಗೆಯೂ ಸಹ ವಿವರಣೆ ನೀಡಿರುವುದಿಲ್ಲ ಎಂದರೆ ಸರಿ. ನಾನು ನನ್ನ ಮೇಲಾಧಿಕಾರಿಗಳ ಮತ್ತು ಪೊಲೀಸರ ಒತ್ತಡದ ಮೇರೆಗೆ ನಿ.ಪಿ*–17* ಮತ್ತು *18* ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿ.ಪಿ*–17* ರಲ್ಲಿ ಮುದ್ದೆ ಮಾಲು *1* ಮತ್ತು *2* ಅನ್ನು ಯಾವ ***methodology*** ಯಲ್ಲಿ ಪರೀಕ್ಷೆ ಮಾಡಿದ್ದೆ ಎಂದು ಹೇಳಿದ್ದೇನೆ ಆದರೆ ಯಾವ ರಾಸಾಯನಿಕ ಬಳಸಿದ್ದೆ ಎಂದು ಹೇಳಿರುವುದಿಲ್ಲ. ನಾನು ಇದೇ ಮೊದಲ ಬಾರಿಗೆ ಮುದ್ದೆ ಮಾಲು *1* ಮತ್ತು *2* ಅನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು *1* ಮತ್ತು *2* ಕ್ಕೂ ಮತ್ತು ಆರೋಪಿತನಿಗೂ ಯಾವುದೇ ರೀತಿಯ ಸಂಬಂದ ಇಲ್ಲದೇ ಇದ್ದರು ಸಹ ನಿ.ಪಿ*–17* ಮತ್ತು *18* ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**